**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ-III, ರಾಯಚೂರು.**
**ಇವರ ನ್ಯಾಯಾಲಯದಲ್ಲಿ.**

**ಸಿ.ಸಿ .ನಂ.:14675/2021**
ಪಿ.ಡಬ್ಲೂ :4
ಸಿ.ಡಬ್ಲೂ. :10

ಸಾಕ್ಷಿದಾರರ ಹೆಸರು : ಕುಮಾರಿ ಅನುರಾಧ ತಂದೆ ಲಕ್ಷ್ಮಣ

ವಯಸ್ಸು : 24 ವರ್ಷ

ಉದ್ಯೋಗ : ಎಮ್.ಸಿ.ಎ ವಿದ್ಯಾರ್ಥಿ

ವಾಸ ಸ್ಥಳ : ರಾಯಚೂರು

(ಈ ದಿವಸ ದಿನಾಂಕ 21-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ:**

1. ಚಾಸಾ 1 ನನ್ನ ತಾಯಿ ಇರುತ್ತಾರೆ. ಚಾಸಾ 2 ರಿಂದ 9 ಪರಿಚಯ ಇರುತ್ತಾರೆ. ಆರೋಪಿಗಳು ಸಹ ಗೊತ್ತಿರುತ್ತಾರೆ. ಆರೋಪಿಗಳ ಮನೆ ನಮ್ಮ ಮನೆಯ ಹತ್ತಿರ ಇದ್ದು, ಆರೋಪಿಗಳ ಮನೆಗೆ ಚಾಸಾ 1 ನಮ್ಮ ತಾಯಿ ಮನೆ ಕೆಲಸಕ್ಕೆ ಸುಮಾರು 8 ವರ್ಷಗಳಿಂದ ಹೋಗುತ್ತಿದ್ದರು. ನಮ್ಮ ತಾಯಿಗೆ ಮೈಯಲ್ಲಿ ಹುಷಾರಿಲ್ಲ ಕಾರಣ ಆರೋಪಿಗಳ ಮನೆಯ ಕೆಲಸಕ್ಕೆ ದಿನಾಂಕಃ 18-10-2017 ಮತ್ತು 19-10-2017 ಕೆಲಸಕ್ಕೆ ಹೋಗಿರುವುದಿಲ್ಲ. ಆ ಕಾರಣ ಆರೋಪಿಗಳು ದಿನಾಂಕಃ 19-10-2017 ರಂದು ರಾತ್ರಿ 10.00 ಸಮಯದಲ್ಲಿ ನಮ್ಮ ಮನೆಯ ಹತ್ತಿರ ಬಂದು ಗಲಾಟೆ ಮಾಡುತ್ತ, ನಮ್ಮ ತಾಯಿಗೆ ಕೆಲಸಕ್ಕೆ ಬರಬೇಕೆಂದು ಗಲಾಟೆ ಮಾಡಿದ್ದು, ಆಗ ನಮ್ಮ ತಾಯಿ ಮೈಯಲ್ಲಿ ಹುಷಾರಿಲ್ಲ ಎಂದು ತಿಳಿಸಿದ್ದು, ಆಗ 1 ನೇ ಆರೋಪಿ ಶ್ರೀಮತಿ ನಾಗಮ್ಮ ಅವರು ನನ್ನ ತಾಯಿಗೆ ಗೂಳಿ ಹಾಗೇ ಇದ್ದಿಯ, ನಿನಗೇನು ದಾಡಿ ಆಗಿದೆ ಎಂದು ಬೈದಿರುತ್ತಾರೆ. ಅದೇ ರೀತಿ 1 ನೇ ಆರೋಪಿಯು ದೀಪಾವಳಿ ಹಬ್ಬ ಇರುವುದರಿಂದ ಮನೆಯಲ್ಲಿ ಬಹಳ ಜನ ಬಂದಿದ್ದಾರೆ ಕೆಲಸಕ್ಕೆ ಬರಬೇಕೆಂದು ಜೋರು ಮಾಡಿರುತ್ತಾರೆ. ಆಗ 2 ನೇ ಆರೋಪಿ ನಮ್ಮ ತಾಯಿಗೆ ಜೋರು ಮಾಡುತ್ತ, ಮನೆಯ ಕೆಲಸಕ್ಕೆ ಬರಲಿಲ್ಲ ಎಂದರೆ ಜೋಪಡಿಯನ್ನು ಕಿತ್ತಿ ಇಲ್ಲಿಂದ ಓಡಿಸುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ. ಆಗ ನಮ್ಮ ತಾಯಿ ಈಗ ಮೈಯಲ್ಲಿ ಹುಷಾರಿಲ್ಲ ಆರಾಮಾದ ನಂತರ ಬರುತ್ತೇನೆ ಎಂದು ತಿಳಿಸಿರುತ್ತಾರೆ. ಆಗ 1 ನೇ ಆರೋಪಿ ನಮ್ಮ ತಾಯಿಗೆ ಬೇಡರ ಜಾತಿಯ ಸೂಳೆರನ್ನು ನಂಬಬಾರದು ಅಂತಾ ಬೈದಿರುತ್ತಾರೆ. ಆಗ ನನ್ನ ತಾಯಿ ಜಾತಿ ವಿಷಯ ಯಾಕೆ ಬೈಯುತ್ತಿರ ಎಂದು ಕೇಳಿದಾಗ 3 ನೇ ಆರೋಪಿ ಏಕೆ ನಮ್ಮ ತಾಯಿಯ ಎದುರು ಮಾತನಾಡುತ್ತಿಯ ಅಂತ ಹೇಳುತ್ತಾ ಚಪ್ಪಲಿಯಿಂದ ಹೊಡೆಯುತ್ತೇನೆ ಎಂದು

ಬೆದರಿಕೆ ಹಾಕಿರುತ್ತಾರೆ. ಆಗ 2 ನೇ ಆರೋಪಿ ಉಳಿದ ಆರೋಪಿಗಳಿಗೆ ಈಗ ಏನು ಮಾತನಾಡುವುದು ಬೇಡ, ನಾಳೆ ಕೆಲಸಕ್ಕೆ ಬರಲಿಲ್ಲ ಎಂದರೆ ಚಪ್ಪಲಿಯಿಂದ ಹೊಡೆಯುತ್ತೇವೆ ಎಂದು ಹೇಳಿ ವಾಪಸ್ಸು ಹೋಗಿರುತ್ತಾರೆ. ಸದರಿ ಘಟನ ನಮ್ಮ ಮನೆಯ ಮುಂದಿನ ರಸ್ತೆಯಲ್ಲಿ ಇರುವ ಕೆ.ಇ.ಬಿ. ಲೈಟ್ ಬೆಳಕಿನಲ್ಲಿ ನಡೆದಿರುತ್ತದೆ.

2. ದಿನಾಂಕಃ 22-10-2017 ರಂದು ನಾನು ಬೆಳಿಗ್ಗೆ ಮನೆಯಲ್ಲಿದ್ದಾಗ, ನಮ್ಮ ತಾಯಿಯು ಹನುಮಾನ್ ಟಾಕೀಸ್ ರಸ್ತೆಯ ಹತ್ತಿರ ಇರುವ ಗೌರಮ್ಮ ರವರ ಕಟ್ಟಿಗೆಯ ಅಡ್ಡೆಗೆ ಕಟ್ಟಿಗೆ ತರಲು ಹೋಗಿದ್ದು, ಕಟ್ಟಿಗೆ ಅಡ್ಡೆಯಲ್ಲಿ ಸದರಿ ಗೌರಮ್ಮನ ಗಂಡ ಮಹಾದೇವಪ್ಪ ಮತ್ತು ಆಕೆಯ ಮಕ್ಕಳಾದ ವೆಂಕಟೇಶ ಹಾಗೂ ಬೀಮಕ್ಕ ಇವರು ಇದ್ದಾಗ, ಆರೋಪಿಗಳು ಎಲ್ಲಾರು ಅಲ್ಲಿಗೆ ಬಂದು ನಮ್ಮ ತಾಯಿಗೆ ಏಕವಚನದಲ್ಲಿ ಬೈಯುತ್ತಾ ಆರೋಪಿಗಳು ಈ ಬೇಡರ ಜಾತಿಯನ್ನು ನಂಬಬೇಡಿ ಎಂದು, 1 ನೇ ಆರೋಪಿ ನಮ್ಮ ತಾಯಿಗೆ ಈಗ ಕೆಲಸಕ್ಕೆ ಬರುತ್ತಿಯ ಇಲ್ಲ ಎಂದು ಬೈಯುತ್ತ, ಕೆಲಸಕ್ಕೆ ಬರಲಿಲ್ಲ ಎಂದರೆ ನಾನು ಮತ್ತು ನನ್ನ ಮಕ್ಕಳು ಇಲ್ಲೆ ಒದ್ದು ಬಿಡುತ್ತೇವೆ ಎಂದು ಬೈಯುತ್ತ 2 ನೇ ಆರೋಪಿಯು 1 ನೇ ಆರೋಪಿಗೆ ಚಾಸಾ 1 ರವರನ್ನು ಒದ್ದು ಓಡಿಸಿ ಎಂದು ಬೈಯುತ್ತ, 1 ನೇ ಆರೋಪಿಯು ಚಾಸಾ 1 ರವರ ತಲೆಯ ಕುದಲನ್ನು ಹಿಡಿದು ಎಳೆದಾಡಿ, ಆಗ ಚಾಸಾ 1 ರವರು ಬಿಡಿಸಿಕೊಳ್ಳಲು ಪ್ರಯತ್ನಿಸಿದಾಗ 2 ನೇ ಆರೋಪಿ 1 ನೇ ಆರೋಪಿಯ ಕೈಯನ್ನು ಮುಟ್ಟುತ್ತಿಯ ಎಂದು ಚಾಸಾ 1 ರವರಿಗೆ ಬೇಡರ ಸೂಳೆ, ನೀಚ ಜಾತಿ ಸೂಳೆ, ಹೊಲಸು ತಿನ್ನುವ ಸೂಳೆ ಅಂತಾ ಬೈದಾಡುತ್ತ ಕೈಯಿಂದ ನಮ್ಮ ತಾಯಿಗೆ ಹೊಡೆದಿರುತ್ತಾರೆ. 3 ನೇ ಆರೋಪಿ ಶಿವು ಸಹ ಕಾಲಿನಿಂದ ನಮ್ಮ ತಾಯಿಗೆ ಹೊಡೆದಿರುತ್ತಾರೆ. ಆಗ ಅಲ್ಲಿಯೇ ಇದ್ದ ಗೌರಮ್ಮ, ಮಹಾದೇವಪ್ಪ, ವೆಂಕಟೇಶ ಮತ್ತು ಭೀಮಕ್ಕರವರ ನಮ್ಮ ತಾಯಿಗೆ ಬಿಡಿಸಿ ಕಳುಹಿಸಿರುತ್ತಾರೆ. ಆಗ ನಮ್ಮ ತಾಯಿ ಮನೆಗೆ ಬಂದು ನನಗೆ ಈ ವಿಷಯ ತಿಳಿಸಿರುತ್ತಾರೆ. ಈ ವಿಷಯವಾಗಿ ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

(ಈ ಸಮಯದಲ್ಲಿ ಆರೋಪಿ ಪರ ವಕೀಲರು ಸಾಕ್ಷಿಯು ಬಾಯಿ ಪಾಠ/Tutor ರೀತಿಯಲ್ಲಿ ಸಾಕ್ಷಿಯನ್ನು ನುಡಿಯುತ್ತಿದ್ದಾರೆ ಎಂದು ಅಕ್ಷೇಪವನ್ನು ವ್ಯಕ್ತಪಡಿಸಿದ್ದು, ಮಾನ್ಯ ಸಹಾಯ ಅಭಿಯುಜಕರು ಸಾಕ್ಷಿಯು ಆ ರೀತಿ ಹೇಳಿರುವುದಿಲ್ಲ ಎಂದು ತಿಳಿಸಿದ್ದು, ಸಾಕ್ಷಿಯು ಸಾಕಷ್ಟು ಬಾರಿ ಬಾಯಿ ಪಾಠದ ರೀತಿಯಲ್ಲಿ ಸಾಕ್ಷಿ ನುಡಿಯುತ್ತಿರುವುದು ಮೇಲನೋಟಕ್ಕೆ ಕಂಡು ಬಂದಿರುತ್ತದೆ)

**<u>ಪಾಟೀ ಸವಾಲು ಶ್ರೀ ಎಮ್.ಎನ್. ಆರೋಪಿತನ ಪರ ವಕೀಲರಿಂದಃ</u>**

1. ನಮ್ಮ ತಾಯಿ ಚಾಸಾ 1 ರವರ ಮೇಲೆ ಜಾಗದ ಸಂಬಂಧ ಆರೋಪಿಗಳು ಸಿವಿಲ್ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ದಾವಾ ನಂ.103/2021 ರ ದಾವೆಯಲ್ಲಿ ಆರೋಪಿಗಳ ಪರ ನ್ಯಾಯಾಲಯವು ಅವರ ಸ್ವಾಧಿನ ಅನುಭವಕ್ಕೆ ದಕ್ಕೆಯನ್ನು ಉಂಟು ಮಾಡಬಾರದು ಎಂದು ನಮ್ಮ ತಾಯಿಯ ವಿರುದ್ದಕ, ತತ್ಕಾಲಿಕ ತಡೆಯಜ್ಞೆಯನ್ನು ನೀಡಿರುತ್ತದೆ ಎಂದರೆ, ಸಾಕ್ಷಿಯು ತಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಈಗ

ನಾವು ಜಾಗದಲ್ಲಿ ಇರುತ್ತೇವೆ ಎಂದು ಹೇಳುವ ಜಾಗ ಆರೋಪಿಗಳ ಮಾಲ್ಕಿ ಜಾಗ ಎಂದರೆ ಸರಿಯಲ್ಲ. ನಾವು ಈಗ ಇರುತ್ತೇವೆ ಎಂದು ಹೇಳುವ ಜಾಗ ಹೇಗೆ ತಮಗೆ ಬಂದಿರುತ್ತದೆ ಎಂದರೆ, ಸಾಕ್ಷಿಯು ತಮ್ಮ ತಾತನ ಕಾಲದಿಂದ ಜಾಗದಲ್ಲಿ ಇದ್ದೇವೆ ಎಂದು ಹೇಳುತ್ತಾರೆ. ಚಾಸಾ 5 ರವರ ಮಗ ಚಾಸಾ 4 ಎಂದರೆ ಸರಿ. ಅದೇ ರೀತಿ ಆರೋಪಿಗಳು ಚಾಸಾ 4 ಮತ್ತು 5 ರವರ ಮೇಲೆ ಜಾಗದ ವಿಷಯವಾಗಿ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ದಾವಾ ನಂ.28/2007 ರ ದಾವೆಯಲ್ಲಿ 1 ನೇ ಆರೋಪಿಯ ಗಂಡ ಪರವಾಗಿ ಚಾಸಾ 4 ಮತ್ತು 5 ರವರ ವಿರುದ್ಧ ಡಿಕ್ರಿ ಆದೇಶವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವೆದಲ್ಲಿ ಆದ ಆದೇಶದ ಪ್ರಕಾರ ಅಮಲ್ಜಾರಿ ಮೂಲಕ ಚಾಸಾ 4 ಮತ್ತ 5 ರವರಿಂದ 1 ನೇ ಆರೋಪಿಯ ಗಂಡನವರು ಜಾಗದ ಸ್ವಾಧಿನವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿಯಲ್ಲಿ ನಮ್ಮ ವಿರುದ್ಧವು ಸಹ ಆದೇಶವಾಗಿ ನಾವು ಜಾಗವನ್ನು ಆರೋಪಿಗಳಿಗೆ ಕೋಡಬೇಕಾಗುತ್ತದೆ ಎಂದು ಈ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

2. ದಿನಾಂಕಃ 19-10-2017 ರ ರಾತ್ರಿಯ ಘಟನೆಗೆ ಸಂಬಂಧ ಪಟ್ಟಂತೆ ನಾವು ಠಾಣೆಯಲ್ಲಿ ದೂರನ್ನು ಅದೇ ದಿನ ಅಥಾವ ಮರುದಿನ ಕೊಟ್ಟಿರುವುದಿಲ್ಲ ಎಂದರೆ ಸರಿ. ದಿನಾಂಕಃ 22-10-2017 ರ ಘಟನೆಯ ನಂತರ ಸಂಬಂಧ ಪಟ್ಟಂತೆ ನಾವು ಠಾಣೆಯಲ್ಲಿ ದೂರನ್ನು ಅದೇ ದಿನ ಅಥಾವ ಮರುದಿನ ಕೊಟ್ಟಿರುವುದಿಲ್ಲ ಎಂದರೆ ಸರಿ, ಸಾಕ್ಷಿಯು ನಾನು ವಿಚಾರ ಮಾಡಿ 2 ದಿನದ ನಂತರ ಚಾಸಾ 1 ರವರು ಠಾಣೆಗೆ ಹೋಗಿ ಫಿರ್ಯಾದನ್ನು ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಚಾಸಾ 1 ರವರು ಠಾಣೆಗೆ ಹೋಗಿರುವುದಿಲ್ಲ ಮತ್ತು ದೂರನ್ನು ಖುದ್ದಾಗಿ ಠಾಣೆಯಲ್ಲಿ ಕೊಟ್ಟಿರುವುದಿಲ್ಲ, ಬದಲಿಗೆ ನೊಂದಾಯಿತ ಅಂಚೆ ಮೂಲಕ ಬೆರಳಚ್ಚು ಮಾಡಿ ಫಿರ್ಯಾದನ್ನು ಠಾಣೆಗೆ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು 2017 ರಲ್ಲಿ ಪಿ.ಯು.ಸಿ ಓದುತ್ತಿದ್ದೇನೆ. ದಿನಾಂಕಃ 19-10-2017 ರಂದು ಆರೋಪಿಗಳು ಚಾಸಾ 1 ರವರಿಗೆ ಜಾತಿ ಹಿಡಿದು ಬೈದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಚಾಸಾ 1 ರವರಿಗೆ ಜಾತಿ ಹಿಡಿದು ಬೈದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಚಾಸಾ 1 ರವರಿಗೆ ಅವಾಚ್ಯ ಶಬ್ಧಗಳಿಂದಲೂ ಸಹ ಬೈದಿರುವುದಿಲ್ಲ ಎಂರದೆ ಸರಿಯಲ್ಲ. ಆರೋಪಿಗಳು ನಮಗೆ ಜೋಪಡಿಯನ್ನು ಕಿತ್ತು ಹಾಕುತ್ತೇವೆ ಎಂದು ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಘಟನೆ ಮನೆಯ ಎದುರಿನ ಲೈಟ್ ಬೆಳಕಿನಲ್ಲಿ ನಡೆದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಿನಾಂಕಃ 19-10-2017 ರಂದು ರಾತ್ರಿ 10.30 ರಂದು ಘಟನೆ ನಡೆದಾಗ ನಮ್ಮ ಮನೆಯ ಅಕ್ಕ-ಪಕ್ಕದ ಸುಮಾರು 5-6 ಜನ ಇದ್ದರು, ಅವರ ಹೆಸರು ನನಗೆ ಗೊತ್ತಿರುವುದಿಲ್ಲ. ದಿನಾಂಕಃ 22-10-2017 ರಂದು ನಮ್ಮ ತಾಯಿ ಹುಷಾರಾಗಿದ್ದರು. ದಿನಾಂಕಃ 22-10-2017 ರಂದು ಚಾಸಾ 5 ರವರ ಕಟ್ಟೆಗೆ ಅಡ್ಡೆಯ ಹತ್ತಿರ ಆರೋಪಿಗಳು ಹೋಗಿ ನಮ್ಮ ತಾಯಿಗೆ ಜಾತಿ ಹಿಡಿದು ಬೈದು ಹೊಡಿಬಡಿ ಮಾಡಿರುತ್ತಾರೆ ಎಂದು, ಈ

ವಿಷಯವನ್ನು ಚಾಸಾ 1 ರವರು ನನಗೆ ಮನೆಗೆ ಬಂದು ತಿಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿ ಚಪ್ಪಲಿಯಿಂದ ಹೊಡೆಯುತ್ತೇನೆ ಎಂದು ಹೇಳಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಸದರಿ ಘಟನೆ ಕಾಲಕ್ಕೆ ನಮ್ಮ ತಾಯಿ ರಾಯಚೂರು ಡೆಂಟಲ್ ಮೆಡಿಕಲ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 1 ನೇ ಆರೋಪಿಯ ಮಗಳ ಮೇಲೆಯು ಸಹ ನಾವು ಫಿರ್ಯಾದನ್ನು ಕೊಟ್ಟಿದ್ದೇವು ಎಂದರೆ ಸರಿ. ಸದರಿ ನಾವು ಕೊಟ್ಟಿರುವ ಫಿರ್ಯಾದನ್ನು ಪೋಲಿಸ್ ನವರು ತನಿಖೆ ಮಾಡಿ ಸುಳ್ಳು ಇದೆ ಎಂದು ವರದಿ ಸಲ್ಲಿಸಿರುತ್ತಾರೆ ಎಂದರೆ, ಸಾಕ್ಷಿಯು ತಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆರೋಪಿಗಳು ನಮ್ಮ ತಾಯಿಗೆ ಜಾತಿ ಹಿಡಿದು ಬೈದಿರುವುದಿಲ್ಲ, ಅಪಮಾನ ಮಾಡಿರುವುದಿಲ್ಲ ಮತ್ತು ಹೊಡಿಬಡಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನಮ್ಮ ತಾಯಿ ಹಾಗೂ ಚಾಸಾ 4 ಮತ್ತು 5 ರವರು ಆರೋಪಿಗಳ ಜಾಗವನ್ನು ಕಬಳಿಸಬೇಕೆಂದು ಈ ಸುಳ್ಳು ಪ್ರಕರಣ ದಾಖಲಿಸಿ ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗಳಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ವಿನಃ ಕಾರಣ ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

ಸಹಿ/-

1-ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು **ಹಾಗೂ 3 ನೇ ಪ್ರ.ದ.ನ್ಯಾ.ದ.,**

ರಾಯಚೂ**ರು.**